ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 30/3/21

### ಕೆ.ಆರ್.ಪೇಟೆ, ಶಿರಾ ಮಾದರಿಯಲ್ಲೇ ಕಾರ್ಯತಂತ್ರ | ಬೆಳಗಾವಿಯಲ್ಲಿ ಮಂಗಲ ಅಂಗಡಿ ನಾಮಪತ್ರ ಸಲ್ಲಿಕೆ ಇಂದು

# ಉಪ ಚುನಾವಣೆಗೆ ಸಿಎಂ ಬಿಎಸ್‌ವೈ ರಣತಂತ್ರ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 30-3-21

ಕರೊನಾ ನಿಯಂತ್ರಣ, ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿಯಾಗದಂತೆ ಆಡಳಿತ ಯಂತ್ರವನ್ನು ಸಜ್ಜುಗೊಳಿಸಿ, ಉಪ ಚುನಾವಣೆಯತ್ತ ಗಮನಹರಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉತ್ಸುಕರಾಗಿದ್ದಾರೆ.

ಉಪ ಚುನಾವಣೆ ನಡೆಯಲಿರುವ 3 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರಲು ತಮ್ಮದೇ ಆದ ರಣತಂತ್ರ ರೂಪಿಸಿಕೊಂಡಿದ್ದಾರೆ. ನಾಮಪತ್ರ ಸಲ್ಲಿಕೆಗೆ ಮಂಗಳವಾರ ಕಡೇ ದಿನವಾಗಿದೆ. ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಮಂಗಲ ಸುರೇಶ್ ಅಂಗಡಿ ಮಂಗಳವಾರ ನಾಮಪತ್ರ ಸಲ್ಲಿಸಲಿದ್ದು, ಸಿಎಂ ಹಾಜರಿರಲಿದ್ದಾರೆ.

### ಇಂದು ನಾಮಪತ್ರ

**ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಮಲ್ಲಮ್ಮ ಬಿ.ನಾರಾಯಣರಾವ್, ಬಿಜೆಪಿಯಿಂದ ಶರಣು ಸಲಗರ್ ಮಂಗಳವಾರ ನಾಮಪತ್ರ ಸಲ್ಲಿಸಲಿದ್ದಾರೆ. ಮಾಜಿ ಶಾಸಕ ಎಂ.ಜಿ.ಮುಳೆ ಎನ್‌ಸಿಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದಾರೆ.**

**ಕೆ.ಆರ್.ಪೇಟೆ, ಶಿರಾ ಮಾದರಿ:** ಪಕ್ಷದ ಗಟ್ಟಿ ನೆಲೆಯಿಲ್ಲದ ಕೆ.ಆರ್.ಪೇಟೆ ಹಾಗೂ ಶಿರಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ್ದು, ಅದೇ ಕಾರ್ಯತಂತ್ರ ಅನುಸರಿಸಲು ಬಿಎಸ್‌ವೈ ಸೂಚಿಸಿದ್ದಾರೆ. ಬೆಳಗಾವಿ, ಮಸ್ಕಿ, ಬಸವಕಲ್ಯಾಣದಲ್ಲಿ ಪಕ್ಷಕ್ಕೆ ಗಟ್ಟಿ ಅಡಿಪಾಯವಿದೆ. ಸಾಲದ್ದಕ್ಕೆ ವೇಳಾಪಟ್ಟಿ ಪ್ರಕಟಕ್ಕೆ ಮುನ್ನವೇ ವ್ಯವಸ್ಥಿತವಾಗಿ ಸಂಘಟನಾ ಚಟುವಟಿಕೆಗಳು ಜಾರಿಯಲ್ಲಿವೆ. ಪಕ್ಷದ ಮುಖಂಡರು, ಕಾರ್ಯಕರ್ತರಲ್ಲಿ ತುಂಬಿರುವ ಹುರುಪು ಸರಿಯಾಗಿ ಬಳಸಿಕೊಂಡು ಜನರ ಒಲವು ಪಕ್ಷದತ್ತ ಸೆಳೆಯಬೇಕು ಎನ್ನುವುದು ಬಿಎಸ್‌ವೈ ಒತ್ತಾಸೆಯಾಗಿದೆ. ಇದಕ್ಕೆ ಪೂರಕವಾಗಿ ಆಯಾ ಕ್ಷೇತ್ರದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳ ಅಭಿವೃದ್ಧಿ ಕೆಲಸಗಳ ಬಗ್ಗೆ ಜನರಿಗೆ ಮನದಟ್ಟು ಮಾಡಿಕೊಡಲು ವಿಶೇಷ ಗಮನಹರಿಸಬೇಕೆಂಬ ಸಲಹೆ ನೀಡಿದ್ದಾರೆ.

ಉಪ ಸಮರ

**ಸಚಿವ, ಶಾಸಕರಿಗೆ ಜವಾಬ್ದಾರಿ:** ಸಚಿವರು ಹಾಗೂ ಶಾಸಕರಿಗೆ ಆಯಾ ಕ್ಷೇತ್ರದಲ್ಲಿ ಠಿಕಾಣಿ ಹೂಡಬೇಕು ಎಂದು ಸಿಎಂ ತಾಕೀತು ಮಾಡಿದ್ದು, ನಿರ್ದಿಷ್ಟ ಜವಾಬ್ದಾರಿ ನೀಡಿದ್ದಾರೆ. ನಾಮಪತ್ರ ಪರಿಶೀಲನೆ ಬಳಿಕ ಬಹಿರಂಗ ಪ್ರಚಾರ ಅಂತ್ಯಗೊಳ್ಳುವ ತನಕ ಬಿರುಸಿನ ಪ್ರಚಾರ, ಮನೆ ಮನೆಗೆ ಭೇಟಿ ನೀಡಿ, ತಂಡಸ್ಫೂರ್ತಿಯಾಗಿ ಕಾರ್ಯನಿರ್ವಹಿಸುವ ಹೊಣೆ ಒಪ್ಪಿಸಿದ್ದಾರೆ. ಟಿಕೆಟ್ ವಂಚಿತ ಆಕಾಂಕ್ಷಿಗಳು ಹಾಗೂ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಸಮಾಧಾನ ತ್ವರಿತವಾಗಿ ಬಗೆಹರಿಸಬೇಕು ಎಂಬ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಬೆಳಗಾವಿ ಡಿಸಿ ಡಾ. ಕೆ.ಹರೀಶಕುಮಾರ ಅವರಿಗೆ ಕಾಂಗ್ರೆಸ್ ಅಭ್ಯರ್ಥಿ ಸತೀಶ್ ಜಾರಕಿಹೊಳಿ ನಾಮಪತ್ರ ಸಲ್ಲಿಸಿದರು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಇದ್ದರು.

## 'ಕರಿ' ದಿನವೇ ಸತೀಶ್ ನಾಮಪತ್ರ

**ಬೆಳಗಾವಿಯಲ್ಲಿ ಸಭೆ ನಡೆಸಿದ್ದು, ಬೆಳಗಾವಿ ಲೋಕಸಭಾ ಹಾಗೂ ಇನ್ನಿತರ 2 ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಚರ್ಚೆ ಮಾಡಿದ್ದೇವೆ. ಕೇಂದ್ರ-ರಾಜ್ಯ ಸರ್ಕಾರದ ವೈಫಲ್ಯಗಳನ್ನೇ ಚುನಾವಣಾ ಅಸ್ತ್ರವಾಗಿಟ್ಟುಕೊಂಡು ಜನರ ಬಳಿ ಹೋಗುತ್ತಿದ್ದೇವೆ.**

**| ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ**

ಬೆಳಗಾವಿ: ಬೆಳಗಾವಿ ಲೋಕಸಭಾ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಸತೀಶ ಜಾರಕಿಹೊಳಿ ಹೋಳಿ ಕರಿದಿನ ಸೋಮವಾರ ಹಸಿರು ಶಾಲು ಹೊದ್ದು ನಾಮಪತ್ರ ಸಲ್ಲಿಸಿದರು. ಬೆಳಗಾವಿ ಕಾಂಗ್ರೆಸ್ ಭವನದಿಂದ ಜಿಲ್ಲಾಧಿಕಾರಿ ಕಚೇರಿ ಆವರಣದವರಗೆ ವಾಹನದಲ್ಲೇ ಆಗಮಿಸಿದ ಸತೀಶ್, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ಮುಖಂಡರ ಸಮೇತ ತೆರಳಿ ಒಟ್ಟು ನಾಲ್ಕು ಸೆಟ್ ಉಮೇದುವಾರಿಕೆ ಸಲ್ಲಿಸಿದರು. ಸತೀಶ್ ಜಾರಕಿಹೊಳಿ ಸೇರಿ 6 ಅಭ್ಯರ್ಥಿಗಳು ಸೋಮವಾರ 9 ನಾಮಪತ್ರ ಸಲ್ಲಿಸಿದ್ದಾರೆ. ಈವರೆಗೆ 9 ಅಭ್ಯರ್ಥಿಗಳು 15 ಉಮೇದುವಾರಿಕೆ ಸಲ್ಲಿಸಿದ್ದಾರೆ.

## ಮಸ್ಕಿಯಲ್ಲಿ ಬಿಜೆಪಿ-ಕಾಂಗ್ರೆಸ್ ಶಕ್ತಿ ಪ್ರದರ್ಶನ

ಮಸ್ಕಿ (ರಾಯಚೂರು): ಮಸ್ಕಿ ಉಪ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ-ಕಾಂಗ್ರೆಸ್ ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸುವ ಮೂಲಕ ಶಕ್ತಿ ಪ್ರದರ್ಶಿಸಿದರು. ವಾರದ ಹಿಂದೆ ಸಿಎಂ ಯಡಿಯೂರಪ್ಪರನ್ನು ಕ್ಷೇತ್ರಕ್ಕೆ ಕರೆಯಿಸಿ ಬಹಿರಂಗ ಸಮಾವೇಶ ನಡೆಸಿದ್ದ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ, ಸೋಮವಾರ ಸಚಿವ ಶ್ರೀರಾಮುಲು ಸೇರಿ ಹಲವು ಮುಖಂಡರು, ಅಪಾರ ಸಂಖ್ಯೆ ಕಾರ್ಯಕರ್ತರೊಡಗೂಡಿ ನಾಮಪತ್ರ ಸಲ್ಲಿಸಿದರು. ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿದ ಬಿಜೆಪಿ ನಾಯಕರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಮತ್ತೊಂದೆಡೆ ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳರ ಜತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯರ ಜತೆಗೆ ಪಟ್ಟಣದಲ್ಲಿ ರ್‍ಯಾಲಿ ನಡೆಸುವ ಮೂಲಕ ಶಕ್ತಿ ಪ್ರದರ್ಶನ ಮಾಡಿದರು. ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ ನಾಯಕರು ಪ್ರತಾಪಗೌಡರ ನಡೆಯನ್ನು ತೀವ್ರವಾಗಿ ಖಂಡಿಸಿದರು.

### ಕುರಿ, ಹಣ ದೇಣಿಗೆ

**ಕಾಂಗ್ರೆಸ್ ಬಹಿರಂಗ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯಗೆ ಹಾಲುಮತ ಸಮಾಜದಿಂದ ಕುರಿಯನ್ನು ದೇಣಿಗೆ ನೀಡಲಾಯಿತು. ಜತೆಗೆ ಮಾದಿಗ, ಛಲವಾದಿ ಸಮುದಾಯದಿಂದ ಅಭ್ಯರ್ಥಿ ಬಸನಗೌಡ ತುರ್ವಿಹಾಳಗೆ ಚುನಾವಣೆ ಖರ್ಚಿಗಾಗಿ ₹2.50 ಲಕ್ಷ ದೇಣಿಗೆ ನೀಡಲಾಯಿತು.**

## ನೂರಾರು ಕೋಟಿ ಒಡೆಯ ಸತೀಶ್

**ಬೆಳಗಾವಿ:** ಸರಳ ಉಡುಗೆ-ತೊಡುಗೆಗೆ ಹೆಸರಾಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ 126 ಕೋಟಿ ರೂ. ಆಸ್ತಿಗೆ ಒಡೆಯ! ಯಮಕನಮರಡಿ ಶಾಸಕರಾಗಿರುವ ಅವರು ಸ್ವಂತಕ್ಕೆ 13.62 ಕೋಟಿ ರೂ. ಚರಾಸ್ತಿ, 113.20 ಕೋಟಿ ರೂ. ಸ್ಥಿರಾಸ್ತಿ ಹೊಂದಿದ್ದು, 6.75 ಕೋಟಿ ರೂ. ಸಾಲ, 2 ಮಹೀಂದ್ರಾ ಸ್ಕಾರ್ಪಿಯೋ ವಾಹನ, ಬೆಂಗಳೂರು, ಬೆಳಗಾವಿಯಲ್ಲಿ ಮನೆ ಮತ್ತು ನಿವೇಶನ ಹೊಂದಿರುವುದಾಗಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ. 2018-19ರಲ್ಲಿ 84 ಲಕ್ಷ ರೂ. ಆದಾಯ ಹೊಂದಿದ್ದ ಸತೀಶ್, 2019-20ರಲ್ಲಿ 27.72 ಲಕ್ಷ ರೂ.ಗೆ ಕುಸಿತ ಕಂಡಿದ್ದಾರೆ. ಸತೀಶ್ ಅವರು ಪತ್ನಿ ಶಕುಂತಲಾರಿಂದ 98.36 ಲಕ್ಷ ರೂ. ಹಾಗೂ ಸಹೋದರ ಬಾಲಚಂದ್ರ ಜಾರಕಿಹೊಳಿಯಿಂದ 38 ಲಕ್ಷ ರೂ. ಕೈಗಡ ಪಡೆದಿದ್ದಾರೆ. ಜತೆಗೆ ಸ್ವಂತಕ್ಕೆಂದು ಬ್ಯಾಂಕ್‌ಗಳಿಂದ 6.75 ಕೋಟಿ ರೂ. ಸಾಲ ಪಡೆದಿದ್ದಾರೆ. ಅಲ್ಲದೆ, ಪತ್ನಿ ಹೆಸರಲ್ಲಿ 4.48 ಕೋಟಿ ರೂ., ಮಗಳು ಪ್ರಿಯಾಂಕಾ ಹೆಸರಲ್ಲಿ 2.34 ಕೋಟಿ ರೂ. ಹಾಗೂ ಮಗ ರಾಹುಲ್ ಹೆಸರಲ್ಲಿ 1.83 ಕೋಟಿ ರೂ. ಸಾಲ ಇರುವುದಾಗಿ ಘೋಷಿಸಿದ್ದಾರೆ. ಸತೀಶ್ ಕುಟುಂಬ ಕೋಟ್ಯಂತರ ರೂ. ಬೆಲೆ ಬಾಳುವ ಕೃಷಿ ಭೂಮಿ ಹೊಂದಿದ್ದು, ಅವರ ಹೆಸರಲ್ಲಿ 1.97 ಕೋಟಿ ರೂ. ಮೌಲ್ಯದ ಕೃಷಿ ಭೂಮಿ, ಪತ್ನಿ ಹೆಸರಲ್ಲಿ 53 ಲಕ್ಷ ರೂ. ಬೆಲೆಯ ಹಾಗೂ ಮಗ-ಮಗಳ ಹೆಸರಲ್ಲಿ ತಲಾ 3.04 ಲಕ್ಷ ರೂ. ಬೆಲೆಯ ಕೃಷಿ ಭೂಮಿ ಇದೆ.

**ಚರಾಸ್ತಿ ಮಾಹಿತಿ**

**ಪತ್ನಿ ಶಕುಂತಲಾ**
6.70 ಕೋಟಿ ರೂ.

**ಮಗಳು ಪ್ರಿಯಾಂಕಾ**
3.13 ಕೋಟಿ ರೂ.

**ಮಗ ರಾಹುಲ್**
1.89 ಕೋಟಿ ರೂ.